ಶ್ರೀ ಮಧ್ವರಾಯರ ಸೇವೆ ದೊರಕುವುದು ಜನುಮ ಸಫಲ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page no. 33.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page no. 57.
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 539.
4. **Note:** Lyrics given here are as per Ref. 1. The wordings in Ref. 2 are same as in Ref. 1 with few differences which are not considered here. The wordings in Ref. 3 are same as in Ref. 2. Also, in Ref. 2 and Ref. 3, there are only 6 stanzas and in Ref. 1 there are 7 stanzas.
5. **Note:** Singer has followed mainly these lyrics. But few major differences are there.

ರಾಗ: ಸಾವೇರಿ ತಾಳ: ಅಟ್ಟ

ಶ್ರೀ ಮಧ್ವರಾಯರ ಸೇವೆ ದೊರಕುವುದು
ಜನುಮ ಸಫಲ ಕಾಣಿರೋ ॥ ಪ ॥

ಶ್ರೀಮದಾನಂದ ತೀರ್ಥರ ಪಾದವ ನೆನೆವರು
ಸಾಮಾನ್ಯ ಸುರರು ಕಾಣೆ - ಬೊಮ್ಮನ ಆಣೆ ॥ ಅಪ ॥

ಜಗತು ಸತ್ಯವು ಅಲ್ಲ ಜಡ-ಜೀವ ಭೇದವಲ್ಲ
ಅಗುಣನು ಪರಬೊಮ್ಮನು
ಹೀಗೆ ನುಡಿವ ಜನರ ನಿಗಮ ಶಾಸ್ತ್ರದಿ ಗೆದ್ದು
ಜಗ ಸತ್ಯ ಸಗುಣ ಬ್ರಹ್ಮ ಎಂದು ಪೇಳುವ ॥ 1 ॥

ಹರಿ ಸರ್ವೋತ್ತಮ ನಿತ್ಯ ತರುವಾಯ ರಮಾದೇವಿ
ತರುವಾಯ ವಿಧಿ ಪ್ರಾಣರು
ಸರಸ್ವತಿ ಭಾರತಿ ಗರುಡ ಅನಂತ ರುದ್ರ
ತರುವಾಯ ಆರು ದೇವಿಗಳು ॥ 2 ॥

ಸೌಪರ್ಣಿ ವಾರುಣಿದೇವಿ ಅಪರ್ಣಾದೇವಿಯರು ಸಮರು
ದ್ವಿಪದಿ ಮನ್ವಾದಿಗಳು
ಈ ಪರಿ ತಾರತಮ್ಯ ಜಪ-ಧ್ಯಾನಾರ್ಚನೆಯಿಂದ
ಅಪವರ್ಗದನ ಸೇವೆಯ ಮಾಡಿರೊ ಎಂಬ ॥ 3 ॥

ಒಂದೊಂದು ಯುಗದಲಿ ಅನಂತ ಸೇವೆಯ ಮಾಡಿ
ಚೆಂದದಿಂದಲಿ ಲಾಲಿಸಿ
ಇಂದಿರಾ ರಮಣ ಗೋವಿಂದನೇ ದೈವವೆಂದು
ಸಂದೇಹವಿಲ್ಲದೆ ಸಾಧಿಸಿ - ಮಾಯೀ ಸೋಲಿಸಿ ॥ 4 ॥

ಹಿಮಗಿರಿಯಿಂದ ಸೇತುವೆಯ ಪರ್ಯಂತರ
ಭ್ರಮಿಸುತ ಸುಜನರಿಗೆ
ಕ್ರಮ ತತ್ತ್ವ ಬೋಧಿಸಿ ಕಮಲನಾಭನ ಮೂರ್ತಿ
ಕ್ರಮವರಿತು ಸ್ಥಾಪಿಸಿ ಪೂಜಿಸಿರೆಂದ ॥ 5 ॥

ಭೂ ತಳದೊಳು ರೌಪ್ಯ ಪುರದಿ ನೆಲಸಿ ಗೆದ್ದು
ಧಾತ್ರೀ ಮುದ್ರೆಯ ತೋರಿಸಿ
ಈತನೇ ಹನುಮಂತ ಈತನೇ ಭೀಮಸೇನ
ಈತನೇ ಭವಿಷ್ಯದ ಬ್ರಹ್ಮ ಜೀವೋತ್ತಮ ॥ 6 ॥

ಶ್ರೀಮದನಂತನೇ ಅನಂತ ಕಾಲಕೆಯೆಂದು
ಯಮಕ ಭಾರತ ತೋರಿಸಿ
ಸ್ವಾಮಿ ಸರ್ವಾಂತರ್ಯಾಮಿ ಸರ್ವ ಗುಣ ಪೂರ್ಣನೆಂದು
ಪ್ರೇಮಿ ಪುರಂದರ ವಿಠಲನ ದಾಸನಾದ ॥ 7 ॥

ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:

ಸಾಮಾನ್ಯ ಸುರರು – ಮುಖ್ಯ ತತ್ತ್ವಾಭಿಮಾನಿಗಳಲ್ಲದ ಇತರ ದೇವತೆಗಳು.

ಬೊಮ್ಮನ ಆಣೆ – ಬ್ರಹ್ಮನಾಣೆ, ಎಂದರೆ ಕಂಡಿತ; ಶಪಥ ಮಾಡಿ ಹೇಳುವ ಬಗೆ.

ಜಗವು ಸತ್ಯವು ಅಲ್ಲ – ಜಗತ್ತು ಮಿಥ್ಯೆ.

ಅಗುಣನು ಪರಬೊಮ್ಮನು – ಪರಬ್ರಹ್ಮನು ನಿರ್ಗುಣ, ನಿರಾಕಾರ, ಅಗಮ್ಯ ಎಂಬ ವಾದ.

ಜಗತು... ... ... ಅಗುಣನು ಪರಬೊಮ್ಮನು – ಅದ್ವೈತ ಶಾಸ್ತ್ರದ ತತ್ವಗಳು

ನಿಗಮ ಶಾಸ್ತ್ರ – ವೇದ ಶಾಸ್ತ್ರ

ಜಗತು ಸಗುಣ ಬ್ರಹ್ಮ: ದ್ವೈತ ಶಾಸ್ತ್ರದ ಮೂಲ ತತ್ವಗಳು

ನಿಗಮ ಶಾಸ್ತ್ರದಿ – ವೈದಿಕ ಪ್ರಮಾಣದಿಂದಲೇ.

ಹರಿ ಸರ್ವೋತ್ತಮ... – ಇಲ್ಲಿಂದ ಮುಂದೆ ಎರಡು ನುಡಿಗಳಲ್ಲಿ ದೇವತಾ ತಾರತಮ್ಯವನ್ನು ಹೇಳಿದ್ದಾರೆ.

(ಕಕ್ಷ ೧ ರಿಂದ ೧೦ ನೇ ಕಕ್ಷದ ವರೆಗಿನ ಅವರೋಹಣ ತಾರತಮ್ಯ ಕ್ರಮವು ಬಂದಿದೆ)

ದ್ವಿಪದಿ = ಇಂದ್ರ ಮತ್ತು ಕಾಮ

ಅಪರ್ಣಾ = ಪಾರ್ವತಿ

ಅಪವರ್ಗದ = ಮೋಕ್ಷಕೊಡುವವ, ಶ್ರೀ ಹರಿ

ಒಂದೊಂದು ಯುಗದಲ್ಲಿ – ತ್ರೇತಾಯುಗದಲ್ಲಿ ಹನುಮನಾಗಿ (ಇವರು ಸಂಕರ್ಷಣ ನಾಮಕ ಪರಮಾತ್ಮ ಮತ್ತು ಜಯಾ ಎಂಬುವರ ಮಗ), ದ್ವಾಪರಯುಗದಲ್ಲಿ ಭೀಮನಾಗಿ, ಕಲಿಯುಗದಲ್ಲಿ ಮಧ್ವಾಚಾರ್ಯರಾಗಿ ಹರಿ ಸೇವೆಯನ್ನು ನಡೆಸಿದರು.

ಕ್ರಮ ತತ್ವ = ತಾರತಮ್ಯ ತತ್ವ

ಹಿಮಗಿರಿಯಿಂದ ಸೇತುವೆಯ ಪರ್ಯಂತರ ಭ್ರಮಿಸುತ = ಆಚಾರ್ಯರು ದಿಗ್ವಿಜಯ ಯಾತ್ರೆ ಗೈಯುತ್ತ ಇಡಿಯ ಭಾರತವನ್ನು ಸುತ್ತಾಡಿದರು. ಹಿಮಾಲಯದಿಂದ ರಾಮೇಶ್ವರದವರೆಗೆ.

ಕಮಲನಾಭನ ಮೂರ್ತಿ = ಶ್ರೀ ಕೃಷ್ಣನ ಮೂರ್ತಿ (ಉಡುಪಿ)

ರೌಪ್ಯ ಪುರ = ಉಡುಪಿ

ಮಾಯಾ ಜಯಿಸಿ – ಮಾಯಾವಾದಿಗಳನ್ನು ಗೆದ್ದು; ಅಥವಾ ಐಕ್ಯಭ್ರಮ, ಸ್ವತಂತ್ರಾತ್ಮ ಭ್ರಮ, ಮೊದಲಾದುವು ಮಾಯೆಯೆನಿಸಿಕೊಳ್ಳುತ್ತವೆ, ಇದನ್ನು ಜಯಿಸಿ.

ಧಾತ್ರಿ ಮುದ್ರೆ – ಭೂಸ್ಪರ್ಶಮುದ್ರೆ; ಬಲಗೈಯ ಬೆರಳುಗಳೆಲ್ಲವನ್ನೂ ಭೂಮಿಯ ಕಡೆ ಚಾಚುವುದು.

ಭವಿಷ್ಯದ ಬ್ರಹ್ಮ = ವಾಯು, ಶ್ರೀ ಮಧ್ವಾಚಾಚಾರ್ಯರು ವಾಯು ದೇವರ ಅವತಾರವಾದ್ದರಿಂದ ಮುಂದೆ ಬರುವ ಕಲ್ಪದಲ್ಲಿ ಬ್ರಹ್ಮ ಪಟ್ಟಕ್ಕೆ ಏರುವವರು

ಜೀವೋತ್ತಮ = ವಾಯು ದೇವರು

ಯಮಕ ಭಾರತ – ಮಧ್ವಾಚಾರ್ಯರು ಬರೆದ ಮೂವತ್ತೇಳು ಗ್ರಂಥಗಳಲ್ಲಿ ಒಂದು. ಇದರಲ್ಲಿ 'ಲೌಕಿಕ ಚಿತ್ರ ಕವಿತೆ' ಎಂಬ ಚಮತ್ಕಾರ ಶೈಲಿಯ ರಚನೆ ಕಾಣುತ್ತದೆ. ವಾಸ್ತವವಾಗಿ ಭಾಗವತದ ಕತೆಯೇ ಹೇಳಲ್ಪಟ್ಟಿದ್ದರೂ, ಭಾರತದ ಸಂಕ್ಷೇಪವೂ ಅದರಲ್ಲಿ ಅಡಗಿದೆ. ಎಂಬತ್ತೊಂದು ಶ್ಲೋಕಗಳ ಈ ಗ್ರಂಥ 'ಯಮಕ' ಅಥವಾ ದ್ವಯಾರ್ಥವೆಂಬ ಜಾತಿಗೆ ಸೇರಿದ ರಚನೆ.

ಅಪವರ್ಗದನ – ಅಪವರ್ಗ (ಮೋಕ್ಷವನ್ನು) ದ (ದಯಪಾಲಿಸುವವ)ನ.

ಈ ಕೀರ್ತನೆಯಲ್ಲಿ ಕಕ್ಷ ತಾರತಮ್ಯ:

೧.	ಪರಮಾತ್ಮ (ಸರ್ವೋತ್ತಮ)	ಕಕ್ಷ ೧
೨.	ರಮಾ ದೇವಿ	ಕಕ್ಷ ೨
೩.	**ವಿಧಿ** = ಬ್ರಹ್ಮ ಮತ್ತು **ಪ್ರಾಣ** = ವಾಯು	ಕಕ್ಷ ೩
೪.	ಸರಸ್ವತಿ - ಭಾರತಿ	ಕಕ್ಷ ೪
೫.	ಗರುಡ, ಅನಂತ (ಶೇಷ), ರುದ್ರ	ಕಕ್ಷ ೫
೬.	ಆರು ದೇವಿಯರು	ಕಕ್ಷ ೬
	(ಕೃಷ್ಣನ ಷಣ್ಮಹಿಷಿಯರು - ಜಾಂಬವತಿ, ಭದ್ರಾ, ನೀಲಾ, ಕಾಳಿಂದಿ, ಮಿತ್ರವಿಂದಾ, ಲಕ್ಷಣಾ)	
೭.	ಸೌಪರ್ಣಿ, ವಾರುಣಿ, ಅಪರ್ಣಾ	ಕಕ್ಷ ೭
೮.	ಇಂದ್ರ, ಕಾಮ (ದ್ವಿಪದಿ)	ಕಕ್ಷ ೮
೯.	ಅಹಂಕಾರಿಕ ಪ್ರಾಣ ದೇವರು	ಕಕ್ಷ ೯
೧೦.	ಮನ್ವಾದಿಗಳು	ಕಕ್ಷ ೧೦

Classification: Keerthane
Ankita: purandara vittala
Location: NA
Category: Taratamya, Madhvacharyara Stuti, Pooja Tatva.
Sub-Category: madhva, Ananda, brahmana, jiva, jada, rama, devi, Ananta, saraswati, garuda, vidhi, prana, sura, satya, japa, yuga, daiva, padma, puje, taratamya, kaksha, hanuma-bhima-madhva, taratamya.
Pravachana: NA
Explanation: NA